**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

ಪಿ.ಸಿ.ಆರ್.ನಂ.288/2022
ಸಿ.ಡಬ್ಲ್ಯೂ.01/ಪಿ.ಡಬ್ಲ್ಯೂ.01

ಸಾಕ್ಷಿಗೆ ಇಂದು ದಿನಾಂಕ 22.12.2022 ರಂದು ಪ್ರಮಾಣ ವಚನ ಬೋಧಿಸಲಾಯಿತು
ಸಾಕ್ಷಿದಾರರ ಸ್ವ ಪ್ರಮಾಣೀಕೃತ ಹೇಳಿಕೆ

ನಾನು ಈ ಪ್ರಕರಣದಲ್ಲಿ ಫಿರ್ಯಾದುದಾರನಾಗಿದ್ದು, ಈ ದಿನ ನನ್ನ ಸ್ವ ಇಚ್ಛಾ ಹೇಳಿಕೆಯ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಅಳವಡಿಸಿಕೊಂಡಿದ್ದೇನೆ. ಪ್ರಮಾಣಪತ್ರದ ವಿಷಯಗಳೆಲ್ಲವೂ ಸತ್ಯವಿದ್ದು, ಅದಕ್ಕೆ ನನ್ನ ಸಹಿ ಇರುತ್ತದೆ.

ಆರೋಪಿ ನೀಡಿದ ಚೆಕ್ ಹಾಜರುಮಾಡಿದ್ದೇನೆ, ಇದನ್ನು ನಿ.ಪಿ.1 ಎಂದು ಗುರ್ತಿಸಲಾಯಿತು. ಚೆಕ್ ಮೇಲೆ ಇರುವ ಆರೋಪಿಯ ಸಹಿಯನ್ನು ಸಾಕ್ಷಿ ಗುರ್ತಿಸಿದ್ದು, ಅದನ್ನು ನಿ.ಪಿ.1(ಎ) ಎಂದು ಗುರ್ತಿಸಲಾಯಿತು. ಬ್ಯಾಂಕ್ ಹಿಂಬರಹ ಹಾಜರುಮಾಡಿದ್ದೇನೆ, ಇದನ್ನು ನಿ.ಪಿ.2 ಎಂದು ಗುರ್ತಿಸಲಾಯಿತು. ವಕೀಲರ ಮುಖಾಂತರ ಆರೋಪಿಗೆ ನೀಡಿದ ನೋಟಿಸಿನ ಕಚೇರಿ ಪ್ರತಿ ಹಾಜರುಮಾಡಿದ್ದೇನೆ, ಇದನ್ನು ನಿ.ಪಿ.3 ಎಂದು ಗುರ್ತಿಸಲಾಯಿತು. ಅಂಚೆ ರಶೀದಿ ಹಾಜರುಮಾಡಿದ್ದೇನೆ, ಇದನ್ನು ನಿ.ಪಿ.4 ಎಂದು ಗುರ್ತಿಸಲಾಯಿತು. ವಕೀಲರ ಮುಖಾಂತರ ನಾನು ಕಳಿಸಿದ ನೋಟಿಸನ್ನು ಆರೋಪಿಗೆ **ಜಾರಿಯಾಗದೇ ವಾಪ್ ಬಂದಿದ್ದು,** ಸದರಿ ಅಂಚೆ ಲಕೋಟೆ ಹಾಜರುಮಾಡಿದ್ದೇನೆ, ಇದನ್ನು ನ್ಯಾಯಾಲಯದಲ್ಲಿ ಒಡೆದು ನೋಡಲಾಗಿ, ಅದರಲ್ಲಿರುವ ನೋಟಿಸನ್ನು ನಿ.ಪಿ.5 ಹಾಗೂ ಅಂಚೆ ಲಕೋಟೆಯನ್ನು ನಿ.ಪಿ.5(ಎ) ಎಂದು ಗುರ್ತಿಸಲಾಯಿತು.

ಈ ಕಾರಣ ಆರೋಪಿಯನ್ನು ಸೂಕ್ತವಾಗಿ ಶಿಕ್ಷಿಸಬೇಕೆಂದು ಹಾಗೂ ನನ್ನ ಹಣವನ್ನು ಮರಳಿಸಲು ಆದೇಶಿಸಬೇಕೆಂದು ಕೋರಿಕೊಳ್ಳುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ., ಮುಧೋಳ